(ಗೊಂದಲ)

ಆರಾಧನಾ ಯೋಜನೆಯ ವ್ಯಾಪ್ತಿ

74 (287) ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ರಾಜ್ಯ ಸರ್ಕಾರದ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಯೋಜನೆಗಳ್ಯಾವುವು?

2. ಆ ಯೋಜನೆಗಳನ್ನು ಕಾರ್ಯಾನುಷ್ಠಾನಗೊಳಿಸಲು ಸರ್ಕಾರ ಪಾಲಿಸುತ್ತಿರುವ ನಿಯಮಗಳೇನು (ಮಾನದಂಡ)?

3. ಆರಾಧನಾ ಯೋಜನೆಯ ಇದರ ವ್ಯಾಪ್ತಿಯಲ್ಲಿಯೇ ಬರುತ್ತಿದೆಯೇ? ಈ ಯೋಜನೆಯಿಂದ ದೊರೆಯುವ ಪ್ರಯೋಜನಗಳೇನು?

4. ಗರೋಡಿಗಳ ನಿರ್ವಹಣೆಯನ್ನು ಆರಾಧನಾ ಯೋಜನೆಗೆ ಅನ್ವಯಗೊಳಿಸಲಾಗಿದೆಯೇ?

5. ಎಸ್.ಸಿ. / ಎಸ್.ಟಿ. ಯವರಿಗಾಗಿ ಇರುವ ವಿಶೇಷ ಧಾರ್ಮಿಕ ಯೋಜನೆಗಳ್ಯಾವುವು?

6. ಆರಾಧನಾ ಯೋಜನೆಯ ಕಾರ್ಯವ್ಯಾಪ್ತಿ ವಿಸ್ತರಿಸಲಾಗಿದೆಯೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

1. ಧಾರ್ಮಿಕ ದತ್ತಿ ಇಲಾಖೆಯಲ್ಲಿ ಪ್ಲಾನ್ ಸ್ಕೀಂಗಳಿರುವುದಿಲ್ಲ. ಆದರೆ ಆರಾಧನಾ ನವ ನಿರ್ಮಾಣ ಹಾಗೂ ಜೀರ್ಣೋದ್ಧಾರ ಎಂಬ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2. ಆರಾಧನಾ ಯೋಜನೆಯ ಸಂಕ್ಷಿಪ್ತ ಮಾರ್ಗಸೂಚಿಯನ್ನು ಲಗತ್ತಿಸಲಾಗಿದೆ. ಆದರೆ ನವ ನಿರ್ಮಾಣದಡಿ ಮತ್ತು ಜೀರ್ಣೋದ್ಧಾರಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರೂಪಿಸಲಾಗುತ್ತಿದೆ.

3. ಆರಾಧನಾ ಯೋಜನೆ, ಯೋಜನೇತರ ಕಾರ್ಯಕ್ರಮದ ಅಡಿಯಲ್ಲಿ ಬರುತ್ತದೆ. ಆರಾಧನಾ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಲಂಬಾಣಿ ತಂಡ, ವಡ್ಡರ ಕೇರಿ, ಹಿಂದುಳಿದ 1ನೇ ವರ್ಗ ಮತ್ತು ಅಲ್ಪಸಂಖ್ಯಾತ ಜನರು ವಾಸಿಸುವ ಸ್ಥಳಗಳಲ್ಲಿ ಪೂಜಾ ಮಂದಿರ, ಪ್ರಾರ್ಥನಾ ಮಂದಿರಗಳ ದುರಸ್ಥಿ : ಜೀರ್ಣೋದ್ಧಾರ : ನವ ನಿರ್ಮಾಣಕ್ಕೆ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿ ಮಂಜೂರು ಮಾಡಲಾಗುತ್ತದೆ.

4. ಗರೋಡಿಗಳ ನಿರ್ವಹಣೆ ಹಾಗೂ ಗರೋಡಿಗಳ ಸಂಚಾಲಕರಿಗೆ ವರ್ಷಾಶನ ಆರಾಧನಾ ಯೋಜನೆಯಡಿ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

5. ವಿಶೇಷ ಧಾರ್ಮಿಕ ಯೋಜನೆಗಳು ಇರುವುದಿಲ್ಲ, ಆದರೆ ಎಸ್‌ಸಿ, ಎಸ್‌ಟಿ ಸಮೂಹದವರು ಆಗಮ ಶಿಕ್ಷಣ ಕಲಿಯಲು ಮುಂದೆ ಬಂದಲ್ಲಿ ಅಂಥವರಿಗೆ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರವೇಶ ಅವಕಾಶವನ್ನು ಕಲ್ಪಿಸಲಾಗಿದೆ.

6. ಸರ್ಕಾರವು ದಿನಾಂಕ 8-1-1997 ರಂದು ಕಾರ್ಯ ವ್ಯಾಪ್ತಿ ವಿಸ್ತರಿಸಿದ್ದು ಇದನ್ನು ಪಾಲಿಸಲಾಗುತ್ತಿದೆ. ಈತೀಚಿಗೆ ಯಾವುದೇ ಕಾರ್ಯ ವ್ಯಾಪ್ತಿ ವಿಸ್ತರಿಸಿರುವುದಿಲ್ಲ.

ಆರಾಧನಾ ಯೋಜನೆ ಬಗ್ಗೆ ಸಂಕ್ಷಿಪ್ತ ಪೂರ್ಣ ಸೂಚಿ

ಆರಾಧನಾ ಯೋಜನೆಯಡಿ ಪರಿಶಿಷ್ಟ ಜಾತಿ : ಪಂಗಡ, ಲಂಬಾಣಿ ತಾಂಡ ವಡ್ಡರ ಕೇರಿ ಹಿಂದೂಳಿದ 1ನೇ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಜನರು ವಾಸಿಸುವ ಸ್ಥಳಗಳಲ್ಲಿ ದೇವಾಲಯ ಪೂಜಾ ಮಂದಿರ ಹಾಗೂ ಪ್ರಾರ್ಥನಾ ಮಂದಿರಗಳ ದುರಸ್ಥಿ : ಜೀರ್ಣೋದ್ಧಾರ ನವನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲೂ ಆ ಕ್ಷೇತ್ರದ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಒಂದು ಆರಾಧನಾ ಸಮಿತಿಯನ್ನು ರಚಿಸಲಾಗುತ್ತದೆ. ಈ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರುತ್ತಾರೆ.

1.	ವಿಧಾನ ಸಭಾ ಸದಸ್ಯರು	ಅಧ್ಯಕ್ಷರು
2.	ಸಂಬಂಧಪಟ್ಟ ತಹಶೀಲ್ದಾರ್	ಸದಸ್ಯ ಕಾರ್ಯದರ್ಶಿ
3.	ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್	ಸದಸ್ಯರು
4.	ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಅಭಿಯಂತರರು	ಸದಸ್ಯರು
5.	ಓರ್ವ ಮಹಿಳೆ	ಸದಸ್ಯರು
6.	ಓರ್ವ ಪರಿಶಿಷ್ಟ ಜಾತಿ	ಸದಸ್ಯರು
7.	ಓರ್ವ ಪರಿಶಿಷ್ಟ ಪಂಗಡ	ಸದಸ್ಯರು
8.	ಓರ್ವ ಸಾಮಾನ್ಯ	ಸದಸ್ಯರು

ವಿಧಾನ ಸಭಾ ಸದಸ್ಯರು ಸಚಿವರಾಗಿದ್ದಲ್ಲಿ ಅಥವಾ ಇನ್ನಿತರೆ ಕಾರ್ಯಭಾರದಿಂದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದು ಸಾಧ್ಯವಿಲ್ಲದಿದ್ದಲ್ಲಿ ಅವರ ಸೂಚನೆಯ ಮೇರೆಗೆ ಅದೇ ಕ್ಷೇತ್ರದ ಬೇರೊಬ್ಬ ವ್ಯಕ್ತಿಯನ್ನು ಸಮಿತಿಯ ಅಧ್ಯಕ್ಷರನ್ನಾಗಿ ಸರ್ಕಾರ ನೇಮಕ ಮಾಡುತ್ತದೆ.

ಈ ಸಮಿತಿಯ ಅವಧಿಯು 5 ವರ್ಷಗಳಾಗಿದ್ದು, ಸರ್ಕಾರ ಇಚ್ಛಿಸಿದ್ದಲ್ಲಿ ಸಮಿತಿಯನ್ನು ಪುನರ್ ರಚಿಸುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ.

ಆರಾಧನಾ ಯೋಜನೆಯಡಿ ಸರ್ಕಾರದಿಂದ ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಲು ಈ ಹಂಚಿಕೆ ಮಾಡಲಾದ ಅನುದಾನವನ್ನು ಆಯಾಯ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಾಗಿ ಅನುಷ್ಠಾನಗೊಳಿಸಲು ರಚಿಸಲಾದ ಆರಾಧನಾ ಸಮಿತಿಯು ಈ ಕೆಳಕಂಡಂತೆ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ ಕಾಮಗಾರಿಗೆ ಅನುದಾನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

1.50 ಪಿ.ಎಂ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವುದು ಆರಾಧನಾ ಯೋಜನೆ ಅಡಿಯಲ್ಲಿ ಏನೇನು ಕಾರ್ಯಕ್ರಮಗಳಿವೆಯೆಂದು, ಈ ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದವರ ಪ್ರಾರ್ಥನಾ ಮಂದಿರಗಳನ್ನು ಹೊಸದಾಗಿ ಕಟ್ಟುವುದಕ್ಕೆ

ಮತ್ತು ಜೀರ್ಣೋದ್ಧಾರ ಮಾಡುವ ಒಂದು ಕಾರ್ಯಕ್ರಮ ಮೊದಲನೆಯದರಲ್ಲಿ ಇತ್ತು. ಆಮೇಲೆ ಇದರ ಜೊತೆಗೆ ಚರ್ಚ್‌ಗಳು ಮತ್ತು ಮಸೀದಿಗಳಿಗೂ ಕೂಡ ಇದರಲ್ಲಿ ಕೊಡಬೇಕೆಂದು ಸರ್ಕಾರ ಸೇರಿಸಿತು. ಇದರ ಪರಿಣಾಮವೇನಾಗಿದೆ ಎಂದರೆ, ಸಾವಿರಾರು ಅರ್ಜಿಗಳು ತಾಲ್ಲೂಕು ಕೇಂದ್ರಕ್ಕೆ ಬರುತ್ತಿವೆ. ಆದರೆ ಇವರು ಕೊಡುವ ಹಣ ಸಾಲುವುದಿಲ್ಲ. ಒಂದು ವರ್ಷಕ್ಕೆ ಒಂದೂವರೆ, ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಹಾಗಾಗಿ ಸರ್ಕಾರದ ಆಶ್ರಯದ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಒಂದು ಹಿನ್ನೆಲೆಯಲ್ಲಿ ದಯಮಾಡಿ ವಾರ್ಷಿಕವಾಗಿ ಕೊಡುವ ಈ ಹಣವನ್ನು ಜಾಸ್ತಿ ಮಾಡುತ್ತೀರಾ? ಈಗಾಗಲೇ ಎಸ್‌ಆರ್ ರೇಟ್ ಎಲ್ಲಾ ಜಾಸ್ತಿಯಾಗಿದೆ. 1991ನೇ ಇಸವಿಯಲ್ಲಿ ಪ್ರಾರಂಭವಾಗಿರತಕ್ಕ ಯೋಜನೆ ಇವತ್ತು 2002ನೇ ಇಸವಿಗೆ ಜಾಸ್ತಿಯಾಗಿದೆ. ಹಣವನ್ನು ತಾವು ಜಾಸ್ತಿ ಮಾಡಿಕೊಡುತ್ತೀರಾ ಎಂದು ತಮ್ಮ ಮುಖಾಂತರ ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀಮತಿ ಸುಮಾ ವಸಂತ್:- ಮಾನ್ಯ ಅಧ್ಯಕ್ಷರೇ, ಈ ಸಾಲಿನಲ್ಲಿ ಆರು ಕೋಟಿ ರೂಪಾಯಿಗಳನ್ನು ಆ ಸಂಸ್ಥೆಗೆ ಬಿಡುಗಡೆ ಮಾಡುತ್ತಿದ್ದೇವೆ ಮತ್ತು ಮಾನ್ಯ ಸದಸ್ಯರ ಕೋರಿಕೆ ಕೂಡ ಬಹಳ ಸೂಕ್ತವಾಗಿದೆ. ಮುಂದಿನ ಸಾಲಿನಲ್ಲಿ ನಾವು ಹೆಚ್ಚಿಗೆ ಮಾಡುವುದಕ್ಕೆ ಪ್ರಸ್ತಾವನೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ:- ಎಸ್‌ಸಿ : ಎಸ್‌ಟಿ ಯವರಿಗೆ ವಿಶೇಷವಾಗಿರುವ ಧಾರ್ಮಿಕ ಯೋಜನೆಗಳಾವುವು ಎಂದು ಕೇಳಿದ್ದೇನೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆ ಜನಾಂಗದವರು ಆಗಮ ಶಿಕ್ಷಣವನ್ನು ಕಲಿಯಲು ಎಷ್ಟು ಜನರು ಮುಂದೆ ಬಂದಿದ್ದಾರೆ? ಎಷ್ಟು ಜನರಿಗೆ ಶಿಕ್ಷಣವನ್ನು ಒದಗಿಸಿಕೊಟ್ಟಿದ್ದೀರಿ? ಎನ್ನುವ ಮಾಹಿತಿ ಬೇಕು.

ಶ್ರೀಮತಿ ಸುಮಾ ವಸಂತ್:- ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಾಹಿತಿಯನ್ನು ನಾನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಕನಕದಾಸರ ಜನ್ಮಸ್ಥಳವಾದ ಶಿಗ್ಗಾಂವ್ ತಾಲ್ಲೂಕಿನ ಬಾಡಾ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು

25 (609) **ಶ್ರೀ ಖಾದ್ರಿ ಎಸ್.ಎಸ್.** (ಶಿಗ್ಗಾಂವ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕನಕದಾಸರ ಜನ್ಮ ಸ್ಥಳವಾದ ಶಿಗ್ಗಾಂವ ತಾಲ್ಲೂಕಿನ ಬಾಡ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಈ ಬಗ್ಗೆ ಯೋಜನೆಯೊಂದನ್ನು ರೂಪಿಸಲಾಗುವುದು, ಆದರ ರೂಪು-ರೇಷೆಗಳೇನು? ಅದಕ್ಕೆ ತಗಲುವ ವೆಚ್ಚ ಎಷ್ಟು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):